# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 16 |
| ಸದಸ್ಯರ ಹೆಸರು | : | ಶ್ರೀ ಮಧು.ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 04-12-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>'ಗೃಹ ಜ್ಯೋತಿ' ಜಾರಿಯಾದ ನಂತರ ಬಾಕಿ ವಿದ್ಯುತ್ ಶುಲ್ಕ ಪಾವತಿಸಲು ಗ್ರಾಹಕರು ಹಿಂದೇಟು ಹಾಕುತ್ತಿರುವುದು ನಿಜವೇ;</td><td>'ಗೃಹ ಜ್ಯೋತಿ' ಯೋಜನೆ ಜಾರಿಯಾದ ನಂತರ ಗ್ರಾಹಕರು ಸಂಪೂರ್ಣ ಬಾಕಿ ವಿದ್ಯುತ್ ಮೊತ್ತವನ್ನು ಪಾವತಿಸಿರುವುದಿಲ್ಲ.</td></tr>
<tr><td>ಆ)</td><td>ಹಾಗಿದ್ದಲ್ಲಿ, ಗೃಹ ಬಳಕೆ ಗ್ರಾಹಕರಿಂದ ವಸೂಲು ಮಾಡಬೇಕಾದ ವಿದ್ಯುತ್ ಬಾಕಿ ಮೊತ್ತ ಎಷ್ಟು; ವಿವಿಧ ವಿದ್ಯುತ್ ನಿಗಮವಾರು ಗ್ರಾಹಕರ ಸಂಖ್ಯೆ ಮತ್ತು ಪಾವತಿಸಬೇಕಾದ ಬಾಕಿ ಮೊತ್ತದ ವಿವರವನ್ನು ನೀಡುವುದು;</td><td>ಗೃಹ ಬಳಕೆ ಗ್ರಾಹಕರಿಂದ ಬರಬೇಕಾದ ವಿದ್ಯುತ್ ಬಿಲ್ ಬಾಕಿ ಮೊತ್ತದ ವಿದ್ಯುತ್ ಕಂಪನಿವಾರು ವಿವರಗಳು ಈ ಕೆಳಕಂಡಂತಿದೆ-
<table>
<tr><th>ಕಂಪನಿ ಹೆಸರು</th><th>ವಿದ್ಯುತ್ ಬಿಲ್ ಬಾಕಿ ಇರುವ ಗೃಹ ಬಳಕೆ ಗ್ರಾಹಕರ ಸಂಖ್ಯೆ (ಅಕ್ಟೋಬರ್-23 ರ ಅಂತ್ಯಕ್ಕೆ)</th><th>ವಿದ್ಯುತ್ ಬಿಲ್ ಬಾಕಿ ಮೊತ್ತ ರೂ ಕೋಟಿಗಳಲ್ಲಿ (ಅಕ್ಟೋಬರ್-23 ರ ಅಂತ್ಯಕ್ಕೆ)</th></tr>
<tr><td>ಬೆಸ್ಕಾಂ</td><td>14,66,017</td><td>397.89</td></tr>
<tr><td>ಮೆಸ್ಕಾಂ</td><td>4,39,887</td><td>62.88</td></tr>
<tr><td>ಸೆಸ್ಕ್</td><td>12,57,192</td><td>306.93</td></tr>
<tr><td>ಹೆಸ್ಕಾಂ<br>( ಸೆಪ್ಟೆಂಬರ್-23 ರ ಅಂತ್ಯಕ್ಕೆ)</td><td>10,52,675</td><td>196.09</td></tr>
<tr><td>ಜೆಸ್ಕಾಂ</td><td>26,80,139</td><td>507.68</td></tr>
<tr><td>ಒಟ್ಟು</td><td>68,95,910</td><td>1,471.47</td></tr>
</table></td></tr>
<tr><td>ಇ)</td><td>ಗೃಹ ಬಳಕೆ ಗ್ರಾಹಕರ 'ಗೃಹ ಜ್ಯೋತಿ' ಯೋಜನೆಯ ಲಾಭ ಪಡೆಯಲು ವಿದ್ಯುತ್ ಶುಲ್ಕದ ಹಳೆಯ ಬಾಕಿ ಮೊತ್ತವನ್ನು ಪಾವತಿಸಲು ಕಾಲಮಿತಿ ನೀಡಲಾಗಿದೆಯೇ;<br>ಹಾಗಿದ್ದಲ್ಲಿ, ಈ ಬಗ್ಗೆ ಮಾಹಿತಿ ನೀಡುವುದು;</td><td>ಗೃಹ ಬಳಕೆ ಗ್ರಾಹಕರು 'ಗೃಹ ಜ್ಯೋತಿ' ಯೋಜನೆಯ ಲಾಭ ಪಡೆಯಲು ದಿನಾಂಕ:30.06.2023 ರ ಅಂತ್ಯಕ್ಕೆ (ಜೂನ್ 2023 ರ ಮಾಹೆಯಲ್ಲಿ ಬಳಸಿದ ವಿದ್ಯುತ್ ಪ್ರಮಾಣಕ್ಕೆ ಜುಲೈ 2023 ರಲ್ಲಿ ವಿತರಿಸಿದ ಬಿಲ್ಲಿನ ಮೊತ್ತ ಒಳಗೊಂಡಂತೆ) ಬಾಕಿ ಇರುವ ವಿದ್ಯುತ್ ಶುಲ್ಕದ ಬಾಕಿ ಮೊತ್ತವನ್ನು ಪಾವತಿಸಲು ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್ಆರ್/2023 ದಿನಾಂಕ 05.06.2023 ರನ್ವಯ, ದಿನಾಂಕ: 30.09.2023 ರವರೆಗೆ ಬಾಕಿಯನ್ನು ಪಾವತಿ ಮಾಡಲು ಕಾಲಾವಕಾಶ ನೀಡಲಾಗಿತ್ತು.</td></tr>
<tr><td>ಈ)</td><td>ವಿವಿಧ ವಿದ್ಯುತ್ ನಿಗಮವಾರು ಸರ್ಕಾರಿ ಇಲಾಖೆಗಳು/ಕಛೇರಿಗಳು ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಶುಲ್ಕವೆಷ್ಟು; (ವಿದ್ಯುತ್ ನಿಗಮವಾರು ಮಾಹಿತಿ ನೀಡುವುದು)</td><td>ವಿವಿಧ ಸರ್ಕಾರಿ ಇಲಾಖೆಗಳು/ಕಛೇರಿಗಳಿಂದ ಬರಬೇಕಾದ ವಿದ್ಯುತ್ ಬಿಲ್ ಬಾಕಿ ಮೊತ್ತದ ವಿದ್ಯುತ್ ಕಂಪನಿವಾರು ವಿವರಗಳು ಈ ಕೆಳಕಂಡಂತಿದೆ-
<table>
<tr><th>ಕಂಪನಿ ಹೆಸರು</th><th>ಸರ್ಕಾರಿ ಇಲಾಖೆಗಳ ವಿದ್ಯುತ್ ಬಿಲ್ ಬಾಕಿ ಮೊತ್ತ ರೂ. ಕೋಟಿಗಳಲ್ಲಿ ( ಸೆಪ್ಟೆಂಬರ್-23 ರ ಅಂತ್ಯಕ್ಕೆ)</th></tr>
<tr><td>ಬೆಸ್ಕಾಂ</td><td>6036.11</td></tr>
<tr><td>ಮೆಸ್ಕಾಂ</td><td>465.01</td></tr>
<tr><td>ಸೆಸ್ಕ್</td><td>736.38</td></tr>
<tr><td>ಹೆಸ್ಕಾಂ</td><td>999.53</td></tr>
<tr><td>ಜೆಸ್ಕಾಂ</td><td>2036.62</td></tr>
<tr><td>ಹುಕ್ಕೇರಿ</td><td>11.95</td></tr>
<tr><td>ಒಟ್ಟು</td><td>10285.60</td></tr>
</table></td></tr>
</table>

....2

| | | |
|---|---|---|
| ಉ) | ಸರ್ಕಾರ ಬಾಕಿ ಮೊತ್ತ ವಸೂಲಿಗೆ ತೆಗೆದುಕೊಂಡ ಕ್ರಮಗಳು ಯಾವುದು? | ಸರ್ಕಾರಿ ಸಂಸ್ಥೆಗಳ ವಿದ್ಯುತ್ ಬಾಕಿ ಮೊತ್ತವನ್ನು ಪಾವತಿಸಲು ಪತ್ರ ವ್ಯವಹಾರ ಹಾಗೂ ಸಂಬಂಧಪಟ್ಟ ಹಿರಿಯ ಅಧಿಕಾರಿಗಳನ್ನು ಖುದ್ದಾಗಿ ಭೇಟಿ ಮಾಡಿ ವಿದ್ಯುತ್ ಬಿಲ್ಲು ಬಾಕಿ ಮೊತ್ತವನ್ನು ಬಿಡುಗಡೆಯಾಗಿರುವ ಅನುದಾನ ಹಾಗೂ ಸ್ವಂತ ಸಂಪನ್ಮೂಲಗಳಿಂದ ಪೂರ್ಣ ಪ್ರಮಾಣದಲ್ಲಿ ಪಾವತಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿದ್ದು, ಪಾವತಿಸದೇ ಇದ್ದ ಪಕ್ಷದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಯಮಾವಳಿ ಪ್ರಕಾರ ವಿದ್ಯುತ್ ನಿಲುಗಡೆ ಕ್ರಮವಹಿಸಲಾಗುವುದೆಂದು ತಿಳಿಸಲಾಗಿರುತ್ತದೆ. |

ಸಂಖ್ಯೆ: ಎನರ್ಜಿ 279 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು